# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 556

2) ಮಾನ್ಯ ಸದಸ್ಯರ ಹೆಸರು : ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3) ಉತ್ತರಿಸುವ ದಿನಾಂಕ : 14/08/2025

4) ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆ ಮತ್ತು ಮಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯಲ್ಲಿ ಹಾಗೂ ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಯಾವ ಯಾವ ಸ್ಥಳಗಳಲ್ಲಿ ಪೊಲೀಸ್ ಠಾಣೆಗಳನ್ನು ತೆರೆಯಲಾಗುವುದು; | ದಕ್ಷಿಣ ಕನ್ನಡ ಜಿಲ್ಲೆ ಮತ್ತು ಮಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಯಲ್ಲಿ ಹಾಗೂ ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಪೊಲೀಸ್ ಠಾಣೆಗಳನ್ನು ತೆರೆಯುವ ಯಾವುದೇ ಪ್ರಸ್ತಾವನೆಯು ಪರಿಶೀಲನೆಯಲ್ಲಿರುವುದಿಲ್ಲ. |
| ಆ) | ಹೆಚ್ಚಿನ ಒತ್ತಡ ಇರುವ ಠಾಣೆಗಳಲ್ಲಿ ಪೊಲೀಸ್ ಸಿಬ್ಬಂದಿಗಳಿಗೆ ಪ್ರತಿದಿನ 12 ಗಿಂತ ಹೆಚ್ಚಿನ ಅವಧಿ ಕರ್ತವ್ಯಕ್ಕೆ ನೇಮಕ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ 12 ಗಂಟೆಗಿಂತ ಹೆಚ್ಚಿನ ಅವಧಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಹೆಚ್ಚುವರಿ ವೇತನ ಮಂಜೂರು ಮಾಡುವ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ; | ಪೊಲೀಸ್ ಮ್ಯಾನ್ಯುಯಲ್‌ನ ಆದೇಶದನ್ವಯ ಸಿಬ್ಬಂದಿಗಳಿಗೆ 08 ಗಂಟೆಗಳ 03 ಪಾಳಿಗಳಲ್ಲಿ ಕರ್ತವ್ಯ ನಿರ್ವಹಿಸಲು ನಿಯೋಜಿಸಲಾಗಿರುತ್ತದೆ. ಠಾಣೆಗಳ ವ್ಯಾಪ್ತಿಯಲ್ಲಿ ಕಾನೂನು ಸುವ್ಯವಸ್ಥೆ ನಿರ್ವಹಣೆ, ಬಂದೋಬಸ್ತ್ ಕರ್ತವ್ಯ ಇತ್ಯಾದಿ ಕರ್ತವ್ಯದ ಒತ್ತಡದ ಕೆಲವು ಸಂದರ್ಭಗಳಲ್ಲಿ ಆಯಾ ಠಾಣಾಧಿಕಾರಿಗಳು ಅವಶ್ಯಕತೆಗನುಗುಣವಾಗಿ ಸಿಬ್ಬಂದಿಗಳನ್ನು ಸೀಮಿತ ಅವಧಿಗೆ 02 ಪಾಳಿಗಳಲ್ಲಿ ಕರ್ತವ್ಯಕ್ಕೆ ನಿಯೋಜಿಸಲಾಗುತ್ತಿದೆ.<br>ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೆಚ್.ಸಿ ಮತ್ತು ಪಿ.ಸಿ ರವರುಗಳು ಹಗಲು ಮತ್ತು ರಾತ್ರಿ ಬೀಟ್ ಕರ್ತವ್ಯ ಹಾಗೂ ಹೆಚ್ಚಿನದ್ದಾಗಿ ಹೊರಾಂಗಣ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ಅವರ ಮಾನಸಿಕ ಸ್ಥಿತಿಯನ್ನು ಉತ್ತಮ ಪಡಿಸಲು ಅನುಕೂಲವಾಗುವಂತೆ ಸದರಿ ಸಿಬ್ಬಂದಿಯವರುಗಳಿಗೆ ಕಡ್ಡಾಯವಾಗಿ ವಾರದ ರಜೆಯನ್ನು ನೀಡಲು ಸುತ್ತೋಲೆ ಸಂಖ್ಯೆ: ಆರ್.ಎಲ್.ಎನ್(1)/14/2021, ದಿನಾಂಕ: 03.08.2021ರಲ್ಲಿ ಘಟಕಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.<br>ಪ್ರಸ್ತುತ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ವಿಶೇಷ ಭತ್ಯೆಗಳ ವಿವರವನ್ನು ಅನುಬಂಧ-1, 2 ಮತ್ತು 3 ರಲ್ಲಿ ಒದಗಿಸಿದೆ. |

| | | |
|---|---|---|
| ಇ) | ಕರಾವಳಿ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣ ದಾಖಲಾಗುವ ಹಾಗೂ ಕೋಮು ಸೂಕ್ಷ್ಮ ಠಾಣಾ ವ್ಯಾಪ್ತಿಯನ್ನು ಹೊಂದಿರುವ ಠಾಣೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ಒತ್ತಡ ಕಡಿಮೆ ಮಾಡುವ ನಿಟ್ಟಿನಲ್ಲಿ ಸದರಿ ಪೊಲೀಸ್ ಠಾಣೆಗಳಿಗೆ ಹೆಚ್ಚುವರಿ ಸಿಬ್ಬಂದಿಗಳನ್ನು ನೇಮಕ ಮಾಡುವ ಬಗ್ಗೆ ಕ್ರಮ ವಹಿಸಲಾಗುವುದೇ; | ಕೋಮು ಸೂಕ್ಷ್ಮ ವ್ಯಾಪ್ತಿಯನ್ನು ಹೊಂದಿರುವ ಠಾಣೆಗಳಿಗೆ ಮಂಜೂರಾತಿ ಬಲದನ್ವಯ ಪೂರ್ಣ ಅಧಿಕಾರಿ/ಸಿಬ್ಬಂದಿ ಬಲವನ್ನು ನಿಯೋಜಿಸಲಾಗುತ್ತಿದ್ದು, ಸದರಿ ಪೊಲೀಸ್ ಠಾಣೆಗಳಿಗೆ ಹೆಚ್ಚುವರಿ ಸಿಬ್ಬಂದಿಗಳನ್ನು ಸೃಜಿಸುವ ಕುರಿತು ಯಾವುದೇ ಪ್ರಸ್ತಾವನೆಯು ಪರಿಶೀಲನೆಯಲ್ಲಿರುವುದಿಲ್ಲ.<br>ರಾಜ್ಯದಲ್ಲಿ ಸಂಭಾವ್ಯ ಕೋಮು ಹಿಂಸಾಚಾರದ ಬಗ್ಗೆ ಕಣ್ಗಾವಲು, ಗುಪ್ತ ಮಾಹಿತಿ ಸಂಗ್ರಹಣೆ, ದ್ವೇಷ ಭಾಷಣ, ಸಾಮಾಜಿಕ ಮಾದ್ಯಮಗಳ ಮೂಲಕ ಉದ್ರೇಕಕಾರಿ ಮಾಹಿತಿ ಹಂಚಿಕೆ ಇತ್ಯಾದಿ ವಿರುದ್ಧ ಕ್ರಮಕೈಗೊಳ್ಳಲು ಹಾಗೂ ಕೋಮು ಗಲಭೆಗಳ ಸಂದರ್ಭಗಳಲ್ಲಿ ಹೆಚ್ಚುವರಿಯಾಗಿ ಅಧಿಕಾರಿ/ಸಿಬ್ಬಂದಿಗಳನ್ನು ನಿಯೋಜಿಸಲು ವಿಶೇಷ ಕಾರ್ಯಪಡೆಯನ್ನು (Special Action Force) ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/83/ಪಿಓಪಿ/2025, ದಿನಾಂಕ: 28.05.2025 ರನ್ವಯ ಸೃಜಿಸಲಾಗಿದೆ. ಸದರಿ ವಿಶೇಷ ಕಾರ್ಯಪಡೆಯ 03 ಕಂಪನಿಗಳನ್ನು ಉಡುಪಿ, ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದ್ದು, ಕಾರ್ಯಪಡೆಯ ಕೇಂದ್ರಸ್ಥಾನವು ಮಂಗಳೂರಿನಲ್ಲಿದೆ. |
| ಈ) | ವಾರದ ರಜೆ ಸಿಗದೇ ಕರ್ತವ್ಯ ನಿರ್ವಹಿಸಿದ ಪೊಲೀಸ್ ಸಿಬ್ಬಂದಿಯವರಿಗೆ ವಾರದ ರಜಾ ಭತ್ಯೆ ಕೇವಲ 200 ರೂ ಮಂಜೂರು ಮಾಡುತ್ತಿರುವುದು ಸರಿಯೇ ವಾರದ ರಜೆ ಸಿಗದೇ ಕರ್ತವ್ಯ ನಿರ್ವಹಿಸಿದ ಸಿಬ್ಬಂದಿಗೆ ಪೂರ್ತಿ ದಿನದ ವೇತನ ನೀಡಲು ಕ್ರಮ ವಹಿಸಲಾಗುವುದೇ; | ವಾರದ ಸಾರ್ವತ್ರಿಕ ರಜೆಯನ್ನು ಬಳಸಿಕೊಳ್ಳದೆ ಕರ್ತವ್ಯ ನಿರ್ವಹಿಸುತ್ತಿರುವ ಹೆಡ್‌ಕಾನ್ಸ್‌ಟೇಬಲ್ ಮತ್ತು ಪೊಲೀಸ್ ಕಾನ್ಸ್‌ಟೇಬಲ್ ವೃಂದದ ಸಿಬ್ಬಂದಿಗಳಿಗೆ ಹೆಚ್ಚುವರಿಯಾಗಿ ಕರ್ತವ್ಯ ನಿರ್ವಹಿಸಿದ ದಿನ ಒಂದಕ್ಕೆ ರೂ.200 ಗಳ ವಾರದ ಭತ್ಯೆಯನ್ನು ನೀಡಲಾಗುತ್ತಿದೆ.<br>ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೆಚ್.ಸಿ ಮತ್ತು ಪಿ.ಸಿ ರವರುಗಳು ಹಗಲು ಮತ್ತು ರಾತ್ರಿ ಬೀಟ್ ಕರ್ತವ್ಯ ಹಾಗೂ ಹೆಚ್ಚಿನದ್ದಾಗಿ ಹೊರಾಂಗಣ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ಅವರ ಮಾನಸಿಕ ಸ್ಥಿತಿಯನ್ನು ಉತ್ತಮ ಪಡಿಸಲು ಅನುಕೂಲವಾಗುವಂತೆ ಸದರಿ ಸಿಬ್ಬಂದಿಯವರುಗಳಿಗೆ ಕಡ್ಡಾಯವಾಗಿ ವಾರದ ರಜೆಯನ್ನು ನೀಡಲು ಸುತ್ತೋಲೆ ಸಂಖ್ಯೆ: ಆರ್.ಎಲ್.ಎನ್(1)/14/2021, ದಿನಾಂಕ: 03.08.2021ರಲ್ಲಿ ಘಟಕಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. |

| | | |
|---|---|---|
| ಉ) | ಪೊಲೀಸ್ ಕಾನ್ಸ್‌ಟೇಬಲ್, ಹೆಡ್ ಕಾನ್ಸ್‌ಟೇಬಲ್ ಮತ್ತು ಎ.ಎಸ್.ಐ.ಗಳಿಗೆ ಮಾಸಿಕವಾಗಿ ಮಂಜೂರು ಮಾಡುವ ಕಷ್ಟ ಪರಿಹಾರ ಭತ್ಯೆ ಎಷ್ಟು ಹೆಡ್ ಕಾನ್ಸ್ ಟೇಬಲ್ ಮತ್ತು ಎ.ಎಸ್.ಐ.ಗಳಿಗೆ ಕಾನ್ಸ್‌ಟೇಬಲ್ ಗಿಂತ ಕಡಿಮೆ ಕಷ್ಟ ಪರಿಹಾರ ಭತ್ಯೆ ನೀಡಲು ಕಾರಣವೇನು? | ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ಕಾನ್ಸ್‌ಟೇಬಲ್, ಹೆಡ್ ಕಾನ್ಸ್‌ಟೇಬಲ್ ಮತ್ತು ಎ.ಎಸ್.ಐ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಆಇ/6/ಎಸ್‌ಆರ್‌ಪಿ/2019, ದಿನಾಂಕ: 18.10.2019ರನ್ವಯ ಕೆಳಕಂಡಂತೆ ಕಷ್ಟ ಪರಿಹಾರ ಭತ್ಯೆಯನ್ನು ಮಾಸಿಕವಾಗಿ ನೀಡಲಾಗುತ್ತಿದೆ. |

| ಹುದ್ದೆ | ಕಷ್ಟ ಪರಿಹಾರ ಭತ್ಯೆ |
|---|---|
| ಪಿ.ಸಿ | 3000 |
| ಹೆಚ್.ಸಿ | 2000 |
| ಎ.ಎಸ್.ಐ | 2000 |

ಪೊಲೀಸ್ ಸಿಬ್ಬಂದಿಗಳಿಗೆ ಕಷ್ಟ ಪರಿಹಾರ ಭತ್ಯೆಯನ್ನು ಕರ್ತವ್ಯ ನಿರ್ವಹಣೆಯ ಸಂದರ್ಭದಲ್ಲಿನ ಪ್ರಯಾಸ, ನಿಗದಿತ ಕರ್ತವ್ಯದ ಅವಧಿಗಿಂತಲೂ ಅತ್ಯಧಿಕ ಅವಧಿಯ ಕರ್ತವ್ಯ, ಅನಾರೋಗ್ಯಕರ ಮತ್ತು ನೈರ್ಮಲ್ಯವಿಲ್ಲದ/ಮಾಲಿನ್ಯವಿರುವ ಕರ್ತವ್ಯದ ಸ್ಥಳ, ಕರ್ತವ್ಯ ನಿರ್ವಹಣೆಯಲ್ಲಿರುವ ಅಪಾಯ ಮತ್ತು ಬೆದರಿಕೆ ಇತ್ಯಾದಿ ಅಂಶಗಳ ಆಧಾರದ ಮೇಲೆ ನಿಗದಿಪಡಿಸಲಾಗಿದೆ.

ಸದರಿ ಅಂಶಗಳ ಆಧಾರದ ಮೇಲೆ ಎ.ಎಸ್.ಐ ಮತ್ತು ಹೆಚ್.ಸಿ ವೃಂದಕ್ಕೆ ಹೋಲಿಸಿದ್ದಲ್ಲಿ ಪಿ.ಸಿ ವೃಂದದಲ್ಲಿನ ಕಾರ್ಯನಿರ್ವಹಣೆಯು ಹೆಚ್ಚು ಪ್ರಯಾಸಕರವಾಗಿರುವ ಕಾರಣ, ಪಿ.ಸಿ ವೃಂದದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಹೆಚ್ಚಿನ ಕಷ್ಟ ಪರಿಹಾರ ಭತ್ಯೆಯನ್ನು ನಿಗದಿಪಡಿಸಲಾಗಿದೆ.

**ಸಂಖ್ಯೆ: ಹೆಚ್‌ಡಿ 155 ಪಿಓಪಿ 2025**

**(ಡಾ|| ಜಿ.ಪರಮೇಶ್ವರ)**
ಗೃಹ ಸಚಿವರು.

## ANNEXURE-1

**Details of Special Allowance paid to Officers/Staff as per G.O. No. FD/24/SRP/2018(XI), Dated: 11.01.2019.**

**(Revised rates of Special Allownace Rs per month)**

| Sl No | | UNIT | Amount | SP/ SP (Non IPS) | DySP/ ACP | PI /RPI | PSI / RSI | ASI/ ARSI | CHC/ AHC | CPC /APC | Followers |
|---|---|---|---|---|---|---|---|---|---|---|---|
| 1 | | **Commom categories** | | | | | | | | | |
| | b) | Senior Stenographer | 300 | - | - | - | - | - | - | - | - |
| | c) | Stenographer | 300 | - | - | - | - | - | - | - | - |
| | e) | Typist/Senior Typist | 300 | - | - | - | - | - | - | - | - |
| | g) | Driver/Senior Driver | 300 | - | - | - | - | - | - | - | - |
| | h) | Lift Attender | 200 | - | - | - | - | - | - | - | - |
| | (2) (a) | Personal Assistant to head of the department | 300 | - | - | - | - | - | - | - | - |
| | (3) (a) | Drivers/Senior Drivers working in the personnel establishment of Heads of the departments and Officers of Equaivalent Rank. | 400[a] | - | - | - | - | - | - | - | - |
| 9 | | **Faculty Members taken on deputation to training Institutions** | | | | | | | | | |
| | d) | All departmental Training Institutes | | | | | | | | | |
| | | Group - A (8000) | | 8000 | 8000 | 6000 | 4000 | 4000 | 4000 | 4000 | - |
| | | Group - B (6000) | | | | | | | | | |
| | | Group -C (4000) | | | | | | | | | |
| 21 | | **Police Department** | | | | | | | | | |
| | (i) | SSB, CID and Finger Print Bureau | - | 600 | 600 | 500 | 400 | - | 300 | 300 | - |
| | (ii) | Police Personnel Working in the District Special Branch | - | - | - | 400 | - | 300 | 300 | 300 | - |
| | (iii) | Police Personnel Working in the Bengaluru City Special Branch | - | - | 600 | 500 | 400 | - | 300 | 300 | - |
| | (iv) | Police Personnel Working in the Criminal Intelligence Bureau | - | - | - | 600 | 500 | - | 300 | 200 | - |
| | (v) | Police Personnel Working in the State Intelligence Machinery (Government Order No: HD/66/EFS/2019, dated: 02.06.2020) | - | 8000 | 7000 | 6000 | 5000 | 4000 | 4000 | 4000 | - |
| | 1 | Stenographer /Reporter -,,- | 1250 | - | - | - | - | - | - | - | - |

| | | | | | | | | | | | |
|---|---|---|---|---|---|---|---|---|---|---|---|
| | 2 | First Division Assistant -,,- | 1250 | - | - | - | - | - | - | - | - |
| | 3 | Typist -,,- | 1000 | - | - | - | - | - | - | - | - |
| | 4 | Second Division Assistant -,,- | 1000 | - | - | - | - | - | - | - | - |
| | (vii) | Corps Of Detectives | - | 3000 | 2500 | 2000 | 1500 | | 1000 | 800 | - |
| | (viii) | Police Personnel Working in Anti Sabotage check and Bomb Disposal Squad under the State Intelligence wing | - | 3000 | 2000 | - | - | - | - | - | - |
| | (ix) | Police personnel posted by the Police department in connection with the security of Vidhan Soudha | - | 2000 | - | - | 1500 | - | - | - | - |
| | (x) | Police personnel deputed by the Police department in connection with the security of Vidhan soudha and Vikas Soudha | - | - | - | - | - | - | 1000 | 800 | - |
| | (xi) | Teaching staff of Permanent Police training Institutions | - | - | - | - | - | - | 4000 | 4000 | - |
| | (xii) | Police Reseach Unit CID | - | 600 | 500 | 400 | 300 | - | - | 300 | - |
| | (xiii) | Law Section | - | - | 500 | 400 | | - | - | | - |
| | (xv) | Prohibition Control Intelligence Bureau (Permanent Establishment) | - | - | - | 400 | 300 | - | 300 | 300 | - |
| | (xvi) | Radio Grid Staff | - | - | - | 500 | 300 | 300 | 300 | 300 | - |
| | | Senior Radio Mechanic | 300 | - | - | - | - | - | - | - | - |
| | | Junior Radio Mechanic | 300 | - | - | - | - | - | - | - | - |
| | | Electrician | 300 | - | - | - | - | - | - | - | - |
| | (xvii) | Computer wing CID, Bengaluru | - | 600 | 500 | 400 | 300 | - | 300 | 300 | - |
| | (xviii) | District Special Branch | - | - | - | 400[b] | - | - | - | - | - |
| | (xix) | TG Mechanic, CAR | 300 | - | - | - | - | - | - | - | - |
| | (xx) | District Intelligence Bureau | - | - | - | - | 300 | 300 | 300 | 300 | - |
| | (xxi) | Driver/Motor Cycle Rider | - | - | - | - | - | - | 300 | 300 | - |

| | | | | | | | | | | | |
|---|---|---|---|---|---|---|---|---|---|---|---|
| | | Driver Mechanic | 300 | - | - | - | - | - | - | - | - |
| | (xxii) | Watchers Organisation staff: | - | - | - | - | - | - | 300 | 300 | - |
| | (xxiii) | Armoury Allowance | - | - | - | - | - | - | 300 | 300 | - |
| | (xxiv) | Mechanic | - | - | - | - | - | - | 300* | 300* | - |
| | (xxv) | Gunmen in the Chief Minister's/Minister's Office | - | - | - | - | - | - | 300 | 300 | - |
| | (xxvi) | Forest Cell Squad | - | - | 600 | 400 | 300 | - | 300 | 300 | - |
| | (xxvii) | Anti Dacoity Squad | - | 600 | 500 | 400 | 300 | - | 300 | 300 | - |
| | (xxviii) | **Shorthand Reporter:** | | | | | | | | | |
| | | Chief Reporter (Group C) | 300 | - | - | - | - | - | - | - | - |
| | | Shorthand Reporter (Group C) | 300 | - | - | - | - | - | - | - | - |
| | (xxix) | Station Writer | - | - | - | - | - | - | 300 | 300 | - |
| | (xxx) | **Government Orchestra/KARP Mounted Company** | | | | | | | | | |
| | | Band Master (Group B) | 300 | - | - | - | - | - | - | - | - |
| | | Assistant Band Master (Group C) | 300 | - | - | - | - | - | - | - | - |
| | | Daffedar (HC) | 300 | - | - | - | - | - | - | - | - |
| | | Musician Grade -1(Group C) | 300 | - | - | - | - | - | - | - | - |
| | | Musician Grade -2 | 300 | - | - | - | - | - | - | - | - |
| | (xxxi) | Police Drivers Posted to the Personal establishment of ACS & prinicopal Secretary, Secretary, Joint Secretary & Deputy Secreatary, Home Department | 300[a] | - | - | - | - | - | - | - | - |
| | (xxxii) | Police Personnal deputed to Anti Naxalite Force and Police Personnal working in Internal Security Division. | - | 8000 | 7000 | 6000 | 5000 | 4000 | 4000 | 4000 | 3000 |
| | (xxxiii) | **Ministrall employees working in ANF amd ISD** | | | | | | | | | |
| | | Stenographer /Reporter | 1250 | - | - | - | - | - | - | - | - |
| | | First Division Assistant | 1250 | - | - | - | - | - | - | - | - |
| | | Typist | 1000 | - | - | - | - | - | - | - | - |
| | | Second Division Assistant | 1000 | - | - | - | - | - | - | - | - |
| **Remarks** | | | | | | | | | | | |
| | a | As Special duty allowance in addittion to special allowance attached to the post of driver | | | | | | | | | |
| | b | Police Inspector (Mysuru. Bengaluru, Chithradurga, Shivamogga, Dharwad, Vijayapura, Ballary, Raichuru, Mangalore, Belgaum, Kalburgi, Karwara and kodagu) | | | | | | | | | |

| ANNEXURE-2 | | | | | |
|---|---|---|---|---|---|
| **Details of Uniform Allowance paid to Officers/Staff as per G.O. No. FD/24/SRP/2018(III), Dated: 11.01.2019.** | | | | | |
| **Sl No** | | **UNIT** | **Initial Grant** | **Yearly Renewal** | **Monthly Maitainance** |
| 1 | | **Police Department** | | | |
| | 1 | SP (Non IPS) | 6000 | 1500 | 500 |
| | 2 | DySP | 6000 | 1500 | 500 |
| | 3 | PI | 5000 | 1500 | 500 |
| | 4 | PSI/ASI/HC/PC | - | - | 500 |
| 12 | | **Others** | | | |
| | 1 | All Senior Driver/ Driver | - | - | 400 |
| | 2 | All Group D and Sanitory Staff | - | - | 400 |

**ANNEXURE-3**

**Details of Special Allowance paid to Officers/Staff as per G.O. No. FD/24/SRP/2018(XI), Dated: 11.01.2019.**

**(Revised rates of Special Allownace Rs per month**

| Sl No | | UNIT | Amount | SP/ SP (Non IPS) | DySP/ ACP | PI /RPI | PSI / RSI | ASI/ ARSI | CHC/ AHC | CPC /APC | Follower |
|---|---|---|---|---|---|---|---|---|---|---|---|
| 33 | | **Special Allowance specific to Police department** | | | | | | | | | |
| | i) | Hardship allowance (Government Order No: FD 6 SRP 2019, dated: 18.10.2019) | - | - | - | - | 2000 | 2000 | 2000 | 3000 | 2000 |
| | ii) | Special Allowance in lieu of Free Ration | - | - | - | - | 400 | 400 | 400 | 400 | - |
| | iii) | Weekly off Allowance | - | - | - | - | - | - | 200 | 200 | 200 |
| | iv) | Transport Allowance | - | - | - | - | 600 | 600 | 600 | 600 | 600 |